# ಕರ್ನಾಟಕ ವಿಧಾನ ಪರಿಷತ್ತು

## ನೂರ ಮೂವತ್ತೊಂಬತ್ತನೆಯ ಅಧಿವೇಶನ

## ಸಾರಾಂಶ

(ದಿನಾಂಕ:10.10.2019 ರಿಂದ 12.10.2019 ರವರೆಗೆ)

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ
ವಿಧಾನ ಸೌಧ, ಬೆಂಗಳೂರು-560 001

# **ಕರ್ನಾಟಕ ವಿಧಾನ ಪರಿಷತ್ತು**

## **ನೂರ ಮೂವತ್ತೊಂಬತ್ತನೆಯ ಅಧಿವೇಶನ**

**ಸಾರಾಂಶ**

(ದಿನಾಂಕ:10.10.2019 ರಿಂದ 12.10.2019 ರವರೆಗೆ)

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ
ವಿಧಾನ ಸೌಧ, ಬೆಂಗಳೂರು-560 001

## ಕರ್ನಾಟಕ ವಿಧಾನ ಪರಿಷತ್ತು

ವಿಧಾನ ಪರಿಷತ್ತಿನ ನೂರ ಮೂವತ್ತೊಂಬತ್ತನೆಯ ಅಧಿವೇಶನವು ದಿನಾಂಕ: 10.10.2019 ರಿಂದ 12.10.2019ರ ವರೆಗೆ ಒಟ್ಟು 03 ದಿನಗಳ ಉಪವೇಶನ ನಡೆಯಿತು. ಅಧಿವೇಶನದ ಒಟ್ಟು ಅವಧಿ 16 ಗಂಟೆ 58 ನಿಮಿಷಗಳು. (**ವಿವರಣಾ ಪಟ್ಟಿ**–1)

### 01. ಸಂತಾಪ ಸೂಚನೆಗಳು

**ಈ ಕೆಳಕಂಡ ಗಣ್ಯವ್ಯಕ್ತಿಗಳು ನಿಧನರಾದುದಕ್ಕೆ ಸದನದಲ್ಲಿ ಸಂತಾಪವನ್ನು ವ್ಯಕ್ತಪಡಿಸಲಾಯಿತು.**

| ಕ್ರ.ಸಂ. | ಹೆಸರು | ಹೊಂದಿದ ಸ್ಥಾನಮಾನ | ದಿನಾಂಕ |
|---|---|---|---|
| 01 | ಪ್ರವೀಣ ಸಿ. ಕಮಲಾನಿ | ವಿಧಾನ ಪರಿಷತ್ತಿನ ಮಾಜಿ ಸದಸ್ಯರು | 10.10.2019 |
| 02 | ಎ.ಕೆ. ಸುಬ್ಬಯ್ಯ | ವಿಧಾನ ಪರಿಷತ್ತಿನ ಮಾಜಿ ಸದಸ್ಯರು | 10.10.2019 |
| 03 | ಉಮೇಶ್ ಭಟ್ | ವಿಧಾನ ಸಭೆಯ ಮಾಜಿ ಸದಸ್ಯರು | 10.10.2019 |
| 04 | ಸಿ.ವೀರಭದ್ರಯ್ಯ | ವಿಧಾನ ಸಭೆಯ ಮಾಜಿ ಸದಸ್ಯರು | 10.10.2019 |
| 05 | ಅರ್ಜುನರಾವ್ ಹಿಶೋಬಿಕರ್ | ವಿಧಾನ ಸಭೆಯ ಮಾಜಿ ಸದಸ್ಯರು | 10.10.2019 |
| 06 | ಸುಷ್ಮಾ ಸ್ವರಾಜ್ | ಕೇಂದ್ರದ ಮಾಜಿ ಸಚಿವರು | 10.10.2019 |
| 07 | ಅರುಣ್ ಜೇಟ್ಲಿ | ಕೇಂದ್ರ ಮಾಜಿ ಸಚಿವರು ಹಾಗೂ ಹಾಲಿ ರಾಜ್ಯಸಭೆಯ ಸದಸ್ಯರು | 10.10.2019 |
| 08 | ರಾಮ್ ಜೇಠ್ಮಲಾನಿ | ಕೇಂದ್ರದ ಮಾಜಿ ಸಚಿವರು | 10.10.2019 |
| 09 | ಇತ್ತೀಚೆಗೆ ರಾಜ್ಯದಲ್ಲಿ ಸಂಭವಿಸಿದ ಪ್ರಕೃತಿ ವಿಕೋಪದ ಪರಿಣಾಮವಾಗಿ ಭೀಕರ ಜಲಪ್ರಳಯದಲ್ಲಿ ಮೃತ ಹೊಂದಿದವರು | | 10.10.2019 |

### 02. ಅಭಿನಂದನಾ ನಿರ್ಣಯ

**01.** ಭಾರತೀಯ ಬ್ಯಾಸ್ಕೆಟ್‌ಬಾಲ್ ಒಕ್ಕೂಟದ ಅಧ್ಯಕ್ಷರಾಗಿ ಮರು ಆಯ್ಕೆಯಾಗಿರುವ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ **ಕೆ.ಗೋವಿಂದರಾಜ್ ಅವರನ್ನು ಅಂತರರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಒಕ್ಕೂಟವು (Federation of International Basketball Association-FIBA)2019**ರಿಂದ 2023 ರವರೆಗೆ ಫಿಬಾ ಸ್ಪರ್ಧಾ ಆಯೋಗದ ಸದಸ್ಯರನ್ನಾಗಿ

ಆಯ್ಕೆಮಾಡಿರುವುದರಿಂದ, ದಿನಾಂಕ:13.10.2019 ರಂದು ಸದನವು ಹೃತ್ಪೂರ್ವಕವಾದ ಅಭಿನಂದನೆಯನ್ನು ಸಲ್ಲಿಸಿತು.

02. **ದಿನಾಂಕ: 13.10.2019** ರಂದು "ರಾಜ್ಯದಲ್ಲಿ ಇತ್ತೀಚೆಗೆ ಸಂಭವಿಸಿದ ಪ್ರಕೃತಿ ವಿಕೋಪದ ಪರಿಣಾಮವಾಗಿ ಭೀಕರ ಜಲಪ್ರಳಯದಲ್ಲಿ ಸಿಲುಕಿದ್ದ ರಾಜ್ಯದ ಸಾವಿರಾರು ಜನರನ್ನು ಹಾಗೂ ಜಾನುವಾರುಗಳನ್ನು ಸುರಕ್ಷಿತವಾಗಿ ರಕ್ಷಿಸಲು ಹಗಲಿರುಳು ಅವಿರತವಾಗಿ ಶ್ರಮಿಸಿದ NDRF ತಂಡ, SDRF ತಂಡ, ತುರ್ತು ಅಗ್ನಿಶಾಮಕದಳ, ವಾಯುಸೇನಾ ಸಿಬ್ಬಂದಿ, ಸೇನಾ ಸಿಬ್ಬಂದಿ, ರಾಜ್ಯದ ವಿವಿಧ ಸಂಘ ಸಂಸ್ಥೆಗಳು, ರಾಜ್ಯದ ಅಧಿಕಾರಿ ಸಿಬ್ಬಂದಿ ವರ್ಗ ಹಾಗೂ ಈ ಒಂದು ಮಹತ್ಕಾರ್ಯದಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಕೈಜೋಡಿಸಿದ ಇತರ ಎಲ್ಲರ ಶ್ರಮವು ಅತ್ಯಂತ ಶ್ಲಾಘನೀಯ ಹಾಗೂ ಅಭಿನಂದನೀಯ ಕಾರ್ಯವಾಗಿರುವುದರಿಂದ" ಅವರುಗಳಿಗೆ ಸದನವು ಹೃತ್ಪೂರ್ವಕವಾದ ಅಭಿನಂದನೆಯನ್ನು ಸಲ್ಲಿಸಿತು.

## 03. ನೂತನ ಸಚಿವರುಗಳ ಪರಿಚಯ

**ಈ ಕೆಳಕಂಡ ನೂತನ ಸಚಿವರುಗಳನ್ನು ಮಾನ್ಯ ಸಭಾನಾಯಕರು ಸದನಕ್ಕೆ ಪರಿಚಯಿಸಿದರು.**

| ಕ್ರ.ಸಂ. | ಹೆಸರು<br>ಶ್ರೀಯುತರುಗಳಾದ | ಪದನಾಮ | ದಿನಾಂಕ |
|---|---|---|---|
| 01 | ಲಕ್ಷ್ಮಣ್ ಸಂಗಪ್ಪ ಸವದಿ | ಮಾನ್ಯ ಉಪ ಮುಖ್ಯಮಂತ್ರಿಗಳು, ಸಾರಿಗೆ ಮತ್ತು ಕೃಷಿ ಸಚಿವರು | 10.10.2019 |
| 02 | ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ್ | ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು | 10.10.2019 |
| 03 | ಹೆಚ್.ನಾಗೇಶ | ಮಾನ್ಯ ಅಬಕಾರಿ, ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು | 10.10.2019 |
| 04 | ಎಸ್.ಸುರೇಶ್ ಕುಮಾರ್ | ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಸಕಾಲ ಹಾಗೂ ಕಾರ್ಮಿಕ ಸಚಿವರು | 10.10.2019 |
| 05 | ಗೋವಿಂದ ಎಂ.ಕಾರಜೋಳ್ | ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಹಾಗೂ ಸಮಾಜ ಕಲ್ಯಾಣ ಸಚಿವರು | 10.10.2019 |
| 06 | ಆರ್.ಅಶೋಕ್ | ಮಾನ್ಯ ಕಂದಾಯ ಹಾಗೂ ಪೌರಾಡಳಿತ, ನಗರಪಾಲಿಕೆ ಮತ್ತು ಸ್ಥಳೀಯ ಸಂಸ್ಥೆಗಳ ಸಚಿವರು | 10.10.2019 |
| 07 | ಕೆ.ಎಸ್.ಈಶ್ವರಪ್ಪ | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಯುವಜನ ಸಬಲೀಕರಣ ಮತ್ತು ಕ್ರೀಡಾ ಸಚಿವರು | 10.10.2019 |

| | | | |
|---|---|---|---|
| ೦೮ | ಶ್ರೀರಾಮುಲು | ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು | 10.10.2019 |
| ೦೯ | ಸಿ.ಟಿ.ರವಿ | ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಸಕ್ಕರೆ ಸಚಿವರು | 11.10.2019 |
| 10 | ಜೆ.ಸಿ.ಮಾಧುಸ್ವಾಮಿ | ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು | 11.10.2019 |
| 11 | ಪ್ರಭು ಚೌಹಾಣ್ | ಮಾನ್ಯ ಪಶುಸಂಗೋಪನೆ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಸಚಿವರು | 11.10.2019 |
| 12 | ಜಗದೀಶ್ ಶೆಟ್ಟರ್ | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಸಾರ್ವಜನಿಕ ಉದ್ಯಮಗಳ ಸಚಿವರು | 12.10.2019 |
| 13 | ಜೊಲ್ಲೆ ಶಶಿಕಲಾ ಅಣ್ಣಾಸಾಹೆಬ್ | ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು | 12.102019 |

## ೦4 . ಕಾರ್ಯದರ್ಶಿಯವರ ವರದಿ

ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ಘನತೆವೆತ್ತ ರಾಷ್ಟ್ರಪತಿಯವರಿಂದ ಹಾಗೂ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ದಿನಾಂಕ: **10.10.2019** ರಂದು ಕಾರ್ಯದರ್ಶಿಯವರು ಸದನದಲ್ಲಿ ಮಂಡಿಸಿದರು. **(ವಿವರಣಾ ಪಟ್ಟಿ-2)** ರಲ್ಲಿ ವಿವರಿಸಿದೆ.

### ೦5. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

೦1. ಪ್ರಸ್ತುತ ಅಧಿವೇಶನದಲ್ಲಿ ಒಟ್ಟು ೦4 ಪಟ್ಟಿಗಳನ್ನು ಸಭೆಯ ಮುಂದೆ ಮಂಡಿಸಲಾಯಿತು. (ವಿವರಣಾ ಪಟ್ಟಿ– 3)

**೦2. ದಿನಾಂಕ:10.10.2019ರಂದು ಶ್ರೀ ಬಿ.ಎಸ್.ಯಡಿಯೂರಪ್ಪ(ಮಾನ್ಯ ಮುಖ್ಯಮಂತ್ರಿಗಳು) ಅವರ ಪರವಾಗಿ ಮಾನ್ಯ ಸಭಾನಾಯಕರು ಈ ಕೆಳಕಂಡ ವರದಿಗಳನ್ನು ಸದನದಲ್ಲಿ ಮಂಡಿಸಿದರು.**

(ಅ) ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು 31ನೇ ಮಾರ್ಚ್, 2018ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ರಾಜಸ್ವ ವಲಯದ ಮೇಲಿನ ವರದಿ (ಸಂಖ್ಯೆ-1).

(ಆ) ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು 31ನೇ ಮಾರ್ಚ್, 2018ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ಆರ್ಥಿಕ ವಲಯದ ಮೇಲಿನ ವರದಿ (ಸಂಖ್ಯೆ-3).

**03. ದಿನಾಂಕ:11.10.2019ರಂದು ಶ್ರೀ ಬಿ.ಎಸ್. ಯಡಿಯೂರಪ್ಪ(ಮಾನ್ಯ ಮುಖ್ಯಮಂತ್ರಿಗಳು) ಅವರ ಪರವಾಗಿ ಮಾನ್ಯ ಸಭಾನಾಯಕರು ಈ ಕೆಳಕಂಡ ವರದಿಗಳನ್ನು ಸದನದಲ್ಲಿ ಮಂಡಿಸಿದರು.**

ಅ) ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು 31ನೇ ಮಾರ್ಚ್, 2018ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ಪಂಚಾಯತ್ ರಾಜ್ ಸಂಸ್ಥೆಗಳ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಮೇಲಿನ ವಾರ್ಷಿಕ ತಾಂತ್ರಿಕ ಪರಿಶೀಲನಾ ವರದಿ.

(ಆ) ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು 31ನೇ ಮಾರ್ಚ್, 2018ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳ ಲೆಕ್ಕಪರಿಶೋಧನಾ ವರದಿ(ಸಂಖ್ಯೆ-2).

ಇ) ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು 31ನೇ ಮಾರ್ಚ್, 2018ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ಸಾಮಾನ್ಯ ಹಾಗೂ ಸಾಮಾಜಿಕ ವಲಯದ ವರದಿ(ಸಂಖ್ಯೆ-4).

## 06. ಪ್ರಕಟಣೆಗಳು

01. **ದಿನಾಂಕ:10.10.2019** ರಂದು ಮಾನ್ಯ ಮುಖ್ಯಮಂತ್ರಿಯವರು ಶ್ರೀ ಕೋಟ ಶ್ರೀನಿವಾಸ ಪೂಜಾರಿ, ಮಾನ್ಯ ಮುಜರಾಯಿ, ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರನ್ನು ವಿಧಾನ ಪರಿಷತ್ತಿನ ಸಭಾನಾಯಕರನ್ನಾಗಿ ನಾಮನಿರ್ದೇಶನ ಮಾಡಿರುತ್ತಾರೆಂದು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

02. **ದಿನಾಂಕ:10.10.2019** ರಂದು ಶ್ರೀ ಎಸ್.ಆರ್.ಪಾಟೀಲ್ ಇವರನ್ನು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರನ್ನಾಗಿ ಮಾನ್ಯತೆ ನೀಡಲಾಗಿದೆ ಎಂದು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

೦3. **ದಿನಾಂಕ:10.10.2019** ರಂದು ಶ್ರೀ ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ ಇವರನ್ನು ವಿಧಾನ ಪರಿಷತ್ತಿನ ಸರ್ಕಾರಿ ಮುಖ್ಯ ಸಚೇತಕರನ್ನಾಗಿ ನೇಮಕ ಮಾಡಲಾಗಿದೆ ಎಂದು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

೦4. ವಿಧಾನ ಪರಿಷತ್ತಿನಲ್ಲಿ ಜನತಾದಳ(ಜಾ) ಶಾಸಕಾಂಗ ಪಕ್ಷದ ನಾಯಕರನ್ನಾಗಿ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಇವರನ್ನು, ಉಪ ನಾಯಕರನ್ನಾಗಿ ಶ್ರೀ ಮರಿತಿಬ್ಬೇಗೌಡ ಇವರನ್ನು ಮತ್ತು ಸಚೇತಕರನ್ನಾಗಿ ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ ಇವರನ್ನು ಪರಿಗಣಿಸಲಾಗಿದೆ ಎಂದು **ದಿನಾಂಕ:10.10.2019** ರಂದು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

೦5. **ದಿನಾಂಕ:11.10.2019** ರಂದು ಮಾನ್ಯ ಸಭಾಪತಿಯವರ ಮತ್ತು ಉಪ ಸಭಾಪತಿಯವರ ಗೈರುಹಾಜರಿಯಲ್ಲಿ ಸಭಾಪತಿಯವರ ಸ್ಥಾನದಲ್ಲಿ ಪದಧಾರಣೆ ಮಾಡುವ ಸದಸ್ಯರುಗಳ ಪಟ್ಟಿಯನ್ನು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

೦6. **ದಿನಾಂಕ: 11.10.2019** ರಂದು ಕಾರ್ಯಕಲಾಪಗಳ ಸಲಹಾ ಸಮಿತಿಯನ್ನು ರಚಿಸಿರುವ ಬಗ್ಗೆ ಮಾನ್ಯ ಸಭಾಪತಿಯವರು ಪ್ರಕಟಿಸಿದರು.

೦7. **ದಿನಾಂಕ:11.10.2019** ರಂದು ಶ್ರೀ ವಿವೇಕ್‌ರಾವ್ ವಸಂತರಾವ್ ಪಾಟೀಲ್ ಅವರು ಅನಿವಾರ್ಯ ಕಾರಣಗಳಿಂದಾಗಿ 139ನೇ ಅಧಿವೇಶನದ ಎಲ್ಲಾ ಉಪವೇಶನಗಳಲ್ಲಿ ಭಾಗವಹಿಸಲು ಸಾಧ್ಯವಾಗುತ್ತಿಲ್ಲವಾದ ಕಾರಣ ಹಾಜರಾತಿ ವಿನಾಯಿತಿ ನೀಡಬೇಕೆಂದು ಕೋರಲಾಗಿದ್ದು, ಸದರಿಯವರ ಗೈರು ಹಾಜರಿಗೆ ಸದನದ ಸಹಮತಿ ಇದೆಯೆಂದು ಭಾವಿಸುತ್ತೇನೆಂದು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

೦8. ವಿಧಾನ ಪರಿಷತ್ತಿನ 139ನೇ ಅಧಿವೇಶನದಲ್ಲಿ ಕಾರ್ಯಕಲಾಪಗಳನ್ನು ನಡೆಸುವ ಬಗ್ಗೆ ಕಾರ್ಯಕಲಾಪ ಸಲಹಾ ಸಮಿತಿಯ ವರದಿಯನ್ನು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

## ೦7. ಗಮನ ಸೆಳೆಯುವ ಸೂಚನೆಗಳು

ನಿಯಮ 72ರಡಿಯಲ್ಲಿ 34 ಸೂಚನೆಗಳನ್ನು ಸ್ವೀಕರಿಸಿದ್ದು, 12 ಸೂಚನೆಗಳಿಗೆ ಉತ್ತರಗಳನ್ನು ಮಾನ್ಯ ಸಭಾನಾಯಕರು ದಿನಾಂಕ:12.10.2019 ರಂದು ಸದನದಲ್ಲಿ ಮಂಡಿಸಿದರು.

**೦8. ನಿಯಮ ೩೩೦ರ ಮೇರೆಗೆ**

ನಿಯಮ ೩೩೦ರಡಿಯಲ್ಲಿ 10 ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ೦5 ಸೂಚನೆಗಳಿಗೆ ಉತ್ತರಗಳನ್ನು ಮಾನ್ಯ ಸಭಾನಾಯಕರು ದಿನಾಂಕ:12.10.2019 ರಂದು ಸದನದಲ್ಲಿ ಮಂಡಿಸಿದರು.

**೦9. ನಿಯಮ ೩೩೦ಎ ಮೇರೆಗೆ**

ಪ್ರಸ್ತುತ ಅಧಿವೇಶನದಲ್ಲಿ ನಿಯಮ ೩೩೦ಎ ಅಡಿಯಲ್ಲಿ ಪ್ರಸ್ತಾಪಿಸಲಾದ ವಿಶೇಷ ಪ್ರಸ್ತಾವನೆಗಳನ್ನು ವಿವರಣಾ ಪಟ್ಟಿ-4 ರಲ್ಲಿ ವಿವರಿಸಲಾಗಿದೆ.

**10. ನಿಯಮ 59ರ ಮೇರೆಗೆ**

ಪ್ರಸ್ತುತ ಅಧಿವೇಶನದಲ್ಲಿ ನಿಯಮ 59ರಡಿಯಲ್ಲಿ ಸ್ವೀಕರಿಸಲಾಗಿದ್ದ ಒಂದು ಸೂಚನೆಯನ್ನು 68ಕ್ಕೆ ಪರಿವರ್ತಿಸಿ 11 ಗಂಟೆ 42 ನಿಮಿಷಗಳ ಕಾಲ ಚರ್ಚೆಯಾಗಿ ಸರ್ಕಾರದಿಂದ ಉತ್ತರಿಸಲಾಗಿರುತ್ತದೆ.

**11. ವರದಿಗಳನ್ನೊಪ್ಪಿಸುವುದು**

ಪ್ರಸ್ತುತ ಅಧಿವೇಶನದಲ್ಲಿ ಸದನದಲ್ಲಿ ಒಪ್ಪಿಸಲಾದ ವರದಿಗಳ ಮಾಹಿತಿಯನ್ನು ವಿವರಣಾ ಪಟ್ಟಿ – 5 ರಲ್ಲಿ ವಿವರಿಸಲಾಗಿದೆ.

**12. ಶಾಸನ ರಚನೆ**

ವಿಧಾನ ಸಭೆಯಲ್ಲಿ ಅಂಗೀಕೃತಗೊಂಡು ವಿಧಾನ ಪರಿಷತ್ತಿನ ಸಹಮತಿ ಪಡೆದಿರುವ ವಿಧೇಯಕಗಳ ಪಟ್ಟಿಗಳನ್ನು ವಿವರಣಾ ಪಟ್ಟಿ-6 ರಲ್ಲಿ ತೋರಿಸಲಾಗಿದೆ.

**13. ವಿತ್ತೀಯ ಕಾರ್ಯಕಲಾಪಗಳು**

01) ದಿನಾಂಕ:10.10.2019 ರಂದು ಶ್ರೀ ಬಿ.ಎಸ್.ಯಡಿಯೂರಪ್ಪ (ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಹಣಕಾಸು ಸಚಿವರು) ಅವರು 2017-18ನೇ ಸಾಲಿನ ಧನವಿನಿಯೋಗ ಹಾಗೂ ಹಣಕಾಸು ಲೆಕ್ಕಗಳ (ಸಂಪುಟ-1 ಮತ್ತು 2)ವರದಿಯನ್ನು ಸದನದಲ್ಲಿ ಮಂಡಿಸಿದರು.

೦2) ದಿನಾಂಕ:11.10.2019 ರಂದು ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಮಾನ್ಯ ಸಭಾನಾಯಕರು 2019-20ನೇ ಸಾಲಿನ ರಾಜ್ಯ ಹಣಕಾಸಿನ ಮಧ್ಯವಾರ್ಷಿಕ ಪರಿಶೀಲನಾ ವರದಿಯನ್ನು ಸದನದಲ್ಲಿ ಮಂಡಿಸಿದರು.

೦3) ದಿನಾಂಕ:12.10.2019 ರಂದು ಶ್ರೀ ಬಿ.ಎಸ್.ಯಡಿಯೂರಪ್ಪ (ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಹಣಕಾಸು ಸಚಿವರು) ಅವರು 2019-20ನೇ ಸಾಲಿನ ಪೂರಕ ಅಂದಾಜುಗಳನ್ನು(ಎರಡನೇ ಕಂತು) ಸದನದಲ್ಲಿ ಮಂಡಿಸಿದರು.

**14. ಧರಣಿ**

ದಿನಾಂಕ:**12.10.2019** ರಂದು ನಿಯಮ 68ರಡಿಯಲ್ಲಿ ಪ್ರಸ್ತಾಪಿಸಲಾಗಿದ್ದ ವಿಷಯಕ್ಕೆ ಕಂದಾಯ ಸಚಿವರು ನೀಡಿದ ಉತ್ತರವನ್ನು ವಿರೋಧಿಸಿ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಧರಣಿ ನಡೆಸಿದರು.

**15. ಅಧಿವೇಶನ ಮುಂದೂಡಿಕೆ**

ದಿನಾಂಕ:10.10.2019ರಂದು ಪ್ರಾರಂಭಗೊಂಡ ವಿಧಾನ ಪರಿಷತ್ತಿನ 139ನೆಯ ಅಧಿವೇಶನವನ್ನು ದಿನಾಂಕ:12.10.2019 ರಂದು ರಾಷ್ಟ್ರಗೀತೆಯೊಂದಿಗೆ ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಯಿತು.

**ಕೆ.ಆರ್.ಮಹಾಲಕ್ಷ್ಮಿ**
**ಕಾರ್ಯದರ್ಶಿ**

## ವಿವರಣಾ ಪಟ್ಟಿ-1

| ಕ್ರ.ಸಂ. | ಅಧಿವೇಶನ ನಡೆದ ದಿನಾಂಕ | ಪ್ರಾರಂಭಗೊಂಡ ಸಮಯ | ಅಂತ್ಯಗೊಂಡ ಸಮಯ | ಒಟ್ಟು ಸಮಯ |
|---|---|---|---|---|
| 01 | 10.10.2019 | ಬೆ:11.48<br>ಮ:03.39 | ಮ:01.55<br>ಸಾ:06.19 | 02.07<br>02.40 |
| 02 | 11.10.2019 | ಬೆ:11.13<br>ಮ:03.34 | ಮ:02.08<br>ರಾ:08.55 | 02.55<br>05.21 |
| 03 | 12.10.2019 | ಬೆ:11.37 | ಮ:03.32 | 03.55 |
| | | | **ಒಟ್ಟು ಸಮಯ** | **16.58** |

## ವಿವರಣಾ ಪಟ್ಟಿ-02
## ಕಾರ್ಯದರ್ಶಿಯವರ ವರದಿ
## ಘನತೆವೆತ್ತ ರಾಷ್ಟ್ರಪತಿ ಮತ್ತು ರಾಜ್ಯಪಾಲರಿಂದ ಒಪ್ಪಿಗೆ ಪಡೆದಿರುವ ವಿಧೇಯಕಗಳ ಪಟ್ಟಿ

| **ಕ್ರಮ ಸಂಖ್ಯೆ** | **ವಿಧೇಯಕಗಳ ಪಟ್ಟಿ** | **ಒಪ್ಪಿಗೆಯನ್ನು ಪಡೆದ ದಿನಾಂಕ** | **ಒಪ್ಪಿಗೆಯನ್ನು ನೀಡಿದವರು** |
|---|---|---|---|
| 01. | ಭೂ ಸ್ವಾಧೀನ, ಪುನರ್ವಸತಿ ಮತ್ತು ಪುನರ್ವ್ಯವಸ್ಥೆಯಲ್ಲಿ ನ್ಯಾಯಯುತ ಪರಿಹಾರ ಮತ್ತು ಪಾರದರ್ಶಕತೆ ಹಕ್ಕು (ಕರ್ನಾಟಕ ತಿದ್ದುಪಡಿ) ವಿಧೇಯಕ, 2019 | 16.07.2019<br>01.03.2019 | ರಾಷ್ಟ್ರಪತಿಯವರು<br>ರಾಜ್ಯಪಾಲರು |
| 02. | ಕರ್ನಾಟಕ ಧನವಿನಿಯೋಗ (ಲೇಖಾನುದಾನ ಸಂಖ್ಯೆ-2) ವಿಧೇಯಕ, 2019 | 29.07.2019 | ರಾಜ್ಯಪಾಲರು |
| 03 | ಕರ್ನಾಟಕ ಧನವಿನಿಯೋಗ (ಸಂಖ್ಯೆ-2) ವಿಧೇಯಕ, 2019 | 29.07.2019 | ರಾಜ್ಯಪಾಲರು |

**ವಿವರಣಾ ಪಟ್ಟಿ-4**
**ನಿಯಮ 330ಎರ ಮೇರೆಗೆ ವಿಶೇಷ ಪ್ರಸ್ತಾವಗಳು**

| ಕ್ರ. ಸಂ | ಸದಸ್ಯರ ಹೆಸರು ಶ್ರೀಯುತರುಗಳಾದ: | ವಿಷಯ | ಚರ್ಚೆಗೆ ತೆಗೆದುಕೊಂಡ ದಿನಾಂಕ | ಷರಾ |
|---|---|---|---|---|
| 01 | ಆರ್.ಚೌಡರೆಡ್ಡಿ ತೂಪಲ್ಲಿ | ಅಕ್ಟೋಬರ್, 10ನ್ನು ವಿಶ್ವ ಜಾಗತಿಕ ವಸತಿ ರಹಿತರ ದಿನವನ್ನಾಗಿ ಆಚರಿಸಲಾಗುತ್ತಿದೆ. ಬೆಂಗಳೂರಿನಲ್ಲಿ 5000ಕ್ಕೂ ಅಧಿಕ ಜನರು ಬೀದಿಯಲ್ಲಿಯೇ ವಾಸಿಸುತ್ತಿದ್ದು, ಸರಿಯಾದ ಊಟ ಮತ್ತು ವಸತಿ ಇಲ್ಲದೆ ದಮನೀಯ ಸ್ಥಿತಿಯಲ್ಲಿರುವರು. ಮಾನ್ಯ ಸರ್ವೋಚ್ಚನ್ಯಾಯಾಲಯವು 2010ರಲ್ಲಿ ದೇಶದ 1 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಎಲ್ಲಾ ನಗರಗಳಲ್ಲೂ ತಂಗುದಾಣ ನಿರ್ಮಿಸಬೇಕೆಂದು ನಿರ್ದೇಶನ ನೀಡಿರುತ್ತದೆ. ಅದರಂತೆ ಬೆಂಗಳೂರಿನಲ್ಲಿ 102 ತಂಗುದಾಣ ಇರಬೇಕಾದ ಜಾಗದಲ್ಲಿ ಕೇವಲ 7 ತಂಗುದಾಣಗಳು ಇರುತ್ತದೆ. ಸರ್ಕಾರವು ಈ ವಿಚಾರದಲ್ಲಿ ತುರ್ತು ಗಮನ ಹರಿಸಿ ತಂಗುದಾಣಗಳನ್ನು ನಿರ್ಮಿಸಿ ಜನರಿಗೆ ಆಶ್ರಯವನ್ನು ಒದಗಿಸುವ ಬಗ್ಗೆ. | 10.10.2019 | ದಿನಾಂಕ:11.10.2019 ರಂದು ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು. |
| 02 | ಐವನ್ ಡಿ'ಸೋಜಾ | ಮಂಗಳೂರು ಮಹಾನಗರ ಪಾಲಿಕೆಯ ಚುನಾಯಿತ ಆಡಳಿತ ಮಂಡಳಿಯ ಅವಧಿಯು ಮುಕ್ತಾಯಗೊಂಡಿದ್ದು, ಆಡಳಿತಾಧಿಕಾರಿ ನೇಮಕಗೊಂಡು 7 ತಿಂಗಳುಗಳು ಕಳೆದಿದ್ದರು ಅಭಿವೃದ್ಧಿ ಕಾರ್ಯಗಳು ಸಂಪೂರ್ಣವಾಗಿ ಸ್ಥಗಿತಗೊಂಡಿರುತ್ತದೆ. ರಾಜ್ಯ ಉಚ್ಚ ನ್ಯಾಯಾಲಯವು ದಿನಾಂಕ: 31.10.2019ರೊಳಗೆ ಚುನಾವಣೆ ನಡೆಸಿ 15.11.2019ರೊಳಗೆ ಚುನಾಯಿತ ಆಡಳಿತ ಮಂಡಳಿ ಅಸ್ತಿತ್ವಕ್ಕೆ ಬರಬೇಕೆಂದು ನಿರ್ದೇಶನ ನೀಡಿದ್ದರೂ ಕ್ರಮಕೈಗೊಳ್ಳದಿರುವ ಬಗ್ಗೆ | 10.10.2019 | ದಿನಾಂಕ:11.10.2019 ರಂದು ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು. |

| | | | | |
|---|---|---|---|---|
| ೦೩ | ಕೆ.ಟಿ.ಶ್ರೀಕಂಠೇಗೌಡ | ರಾಜ್ಯ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಹುದ್ದೆಗಾಗಿ ನಡೆದ ನೇಮಕಾತಿಯ ಪರೀಕ್ಷೆಗಾಗಿ ಸಿದ್ಧಪಡಿಸಿರುವ "ಕೀ ಉತ್ತರ"ಗಳಲ್ಲಿ ತಪ್ಪುಗಳು ಕಂಡು ಬಂದಿದ್ದು, "ಕೀ ಉತ್ತರಗಳ" ಲೋಪಗಳನ್ನು ಸರಿಪಡಿಸಿ ಸೂಕ್ತ ಉತ್ತರಗಳ ಬಗ್ಗೆ ತಜ್ಞರಿಂದ ಪರಿಷ್ಕರಿಸಿ ಪ್ರಕಟಿಸಿ ನಂತರ ನೇಮಕಾತಿ ಪ್ರಕ್ರಿಯೆಯನ್ನು ಮುಂದುವರಿಸಿ ಅರ್ಹ ಅಭ್ಯರ್ಥಿಗಳನ್ನು ಆಯ್ಕೆಮಾಡುವ ಬಗ್ಗೆ | 11.10.2019 | ದಿನಾಂಕ:12.10. 2019 ರಂದು ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು. |
| ೦೪ | ಶ್ರೀ ವಿಜಯ್ ಸಿಂಗ್ | ರೈತರ ಪಹಣಿಯಲ್ಲಿ ನಮೂದಿಸಿದ ಬೆಳೆಯನ್ನು ಮಾತ್ರ ಖರೀದಿಸುವ ಸರ್ಕಾರದ ನಿಯಮದಿಂದಾಗಿ ರೈತರು ಸಂಕಷ್ಟಕ್ಕೀಡಾಗಿದ್ದು, ಕನಿಷ್ಠ ಬೆಂಬಲ ಬೆಲೆ ಅಡಿಯಲ್ಲಿ ಉದ್ದು ಮತ್ತು ಹೆಸರು ಕಾಳು ಖರೀದಿಸಬೇಕು ಹಾಗೂ ಖರೀದಿಯ ಮಿತಿಯನ್ನು ಹೆಚ್ಚಿಸಿ, ಉದ್ದು ಮತ್ತು ಹೆಸರು ಕಾಳು ಮಾರಾಟ ಮಾಡಲು ನೋಂದಣಿ ಮಾಡಿಸುವ ಕೊನೆಯ ದಿನಾಂಕವನ್ನು ವಿಸ್ತರಿಸಿ ರೈತರಿಗೆ ಅನುಕೂಲ ಮಾಡಿಕೊಡುವ ಬಗ್ಗೆ | 11.10.2019 | ದಿನಾಂಕ:12.10. 2019 ರಂದು ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು. |
| ೦೫ | ಎಸ್.ವ್ಹಿ.ಸಂಕನೂರ | ಕಾರವಾರ ಜಿಲ್ಲೆಯ ಅನುದಾನಿತ ಶಾಲಾ ಕಾಲೇಜುಗಳ ಶಿಕ್ಷಕರ ಸಂಘದಿಂದ ಜಿಲ್ಲಾಧಿಕಾರಿಗಳ ಕಛೇರಿ ಎದುರು ಹಲವಾರು ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ದಿನಾಂಕ: 9.10.2019ರಿಂದ ಹಮ್ಮಿಕೊಂಡಿರುವ ಅನಿರ್ಧಿಷ್ಟಾವಧಿ ಅಹೋರಾತಿ ಧರಣಿಯ ಬಗ್ಗೆ. | 11.10.2019 | ದಿನಾಂಕ:12.10. 2019 ರಂದು ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು. |
| ೦೬ | ಎನ್.ಅಪ್ಪಾಜಿಗೌಡ | ರಾಜ್ಯದಲ್ಲಿ ಅಸಂಖ್ಯಾತ ಜನರು ಸೈಬರ್ ಮೂಲಕ ಹಣ ಕಳುವು ಹಾಗೂ ವಂಚನೆಗೆ ಒಳಗಾಗಿ ತೊಂದರೆಗೀಡಾಗಿದ್ದು, ಈ ರೀತಿಯ ಸೈಬರ್ ಮೂಲದ ಹಣ ವಂಚನೆ ಹಾಗೂ ಕಳವುಗಳನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳ ಬಗ್ಗೆ | 11.10.2019 | ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |

| | | | | |
|---|---|---|---|---|
| 07 | ಶ್ರೀ ಮರಿತಿಬ್ಬೇಗೌಡ ಮತ್ತು ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ | ರಾಜ್ಯದ 410 ಸರ್ಕಾರಿ ಪದವಿ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳ ಸಕ್ರಮಾತಿ, ಗೌರವಧನ ಹೆಚ್ಚಳ, ಬಾಕಿ ಇರುವ ಗೌರವಧನ ಬಿಡುಗಡೆ ಸಂಬಂಧದಲ್ಲಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಧರಣಿ ನಡೆಸುತ್ತಿರುವ ಬಗ್ಗೆ | 12.10.2019 | ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 08 | ಕೆ.ಟಿ.ಶ್ರೀಕಂಠೇಗೌಡ | ಮಂಡ್ಯ ಜಿಲ್ಲೆಯಲ್ಲಿ ಕಬ್ಬು ಬೆಳೆಗಾರರ ಕಬ್ಬನ್ನು ಕೊಂಡುಕೊಳ್ಳಲು ಕಾರ್ಖಾನೆಗಳು ವಿಳಂಬ ಮಾಡುತ್ತಿದ್ದು, ಮಂಡ್ಯದ ಮೈಷುಗರ್ ಸಕ್ಕರೆ ಕಾರ್ಖಾನೆ ಮತ್ತು ಪಾಂಡವಪುರದ ಪಿ.ಎಸ್.ಎಸ್.ಕೆ. ಕಾರ್ಖಾನೆಗಳು ಆರಂಭವಾಗದ ಹಿನ್ನಲೆಯಲ್ಲಿ ರೈತರು ಬೆಳೆದಂತಹ ಕಬ್ಬನ್ನು ಹೊರಗಿನ ಕಾರ್ಖಾನೆಗಳಿಗೆ ಸಾಗಾಣಿಕೆ ಮಾಡಬೇಕಾದಂತಹ ಅನಿವಾರ್ಯ ಸ್ಥಿತಿ ಉಂಟಾಗಿದ್ದು, ಹೊರಗಿನ ಕಾರ್ಖಾನೆಗಳು ಈ ಭಾಗದ ರೈತರ ಕಬ್ಬನ್ನು ಕಟಾವು ಮಾಡಲು ವಿಳಂಬ ಮಾಡುತ್ತಿರುವುದರಿಂದ ರೈತರಲ್ಲಿ ಆತಂಕದ ವಾತಾವರಣ ಉಂಟು ಮಾಡಿರುವ ಬಗ್ಗೆ | 12.10.2019 | ಮಾನ್ಯ ಕಂದಾಯ ಸಚಿವರು ಉತ್ತರಿಸಿದರು. |
| 09 | **ಎಸ್.ವ್ಹಿ.ಸಂಕನೂರ** | ರಾಜ್ಯದಲ್ಲಿರುವ 82 ಸರ್ಕಾರಿ ಪಾಲಿಟೆಕ್ನಿಕ್ ಹಾಗೂ 10 ತಾಂತ್ರಿಕ ಮಹಾ ವಿದ್ಯಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳಿಗೆ ಸುಮಾರು ಎರಡು ವರ್ಷಗಳಿಂದ ವೇತನ ಬಿಡುಗಡೆ ಮಾಡದಿರುವ ಬಗ್ಗೆ | 12.10.2019 | ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು |
| 10 | **ಅ.ದೇವೇಗೌಡ** | ರಾಜ್ಯ ಒಕ್ಕಲಿಗರ ಸಂಘದಲ್ಲಿ ನಡೆದಿರುವ ಅಕ್ರಮಗಳ ವಿರುದ್ಧ ಪೂರ್ಣ ಪ್ರಮಾಣದ ತನಿಖೆ ನಡೆಸಿ, ತಾರ್ಕಿಕ ಅಂತ್ಯ ಕಾಣಿಸುವ ಸಂಬಂಧದಲ್ಲಿ ಸರ್ಕಾರವು ಕ್ರಮ ಕೈಗೊಳ್ಳುವ ಬಗ್ಗೆ | 12.10.2019 | ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು |

**ವಿವರಣಾ ಪಟ್ಟಿ –05**
**ಸದನಕ್ಕೆ ಒಪ್ಪಿಸಲಾದ ವರದಿಗಳ ಪಟ್ಟಿ**

| ಕ್ರ. ಸಂ | ಸಮಿತಿಯ ಹೆಸರು | ಒಪ್ಪಿಸಿದ ದಿನಾಂಕ | ವರದಿಯ ಸಂಖ್ಯೆ |
|---|---|---|---|
| 01 | ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ | 10.10.2019 | 02ನೇ ವರದಿ |
| 02 | ವಿಧಾನ ಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿ | 10.10.2019 | 28ನೇ ವರದಿ (ಅನುಪಾಲನಾ) |
| 03 | ವಿಧಾನ ಮಂಡಲದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ | 11.10.2019 | 35ನೇ ವರದಿ |
| 04 | ವಿಧಾನ ಮಂಡಲದ ಅಧೀನ ಶಾಸನ ರಚನಾ ಸಮಿತಿ | 11.10.2019 | 47(42ನೇ ವರದಿಯ ಅನುಸರಣಾ ವರದಿ)ವರದಿ |

**ವಿವರಣಾ ಪಟ್ಟಿ –06**
**ವಿಧಾನ ಸಭೆಯಲ್ಲಿ ಅಂಗೀಕೃತಗೊಂಡು ವಿಧಾನ ಪರಿಷತ್ತಿನ**
**ಸಹಮತಿ ಪಡೆದಿರುವ ವಿಧೇಯಕಗಳ ವಿವರ**

| **ಕ್ರ ಸಂ** | **ವಿಧೇಯಕದ ಹೆಸರು** | **ವಿ .ಸ ಅಂಗೀಕರಿಸಿರುವ ದಿನಾಂಕ** | **ವಿ. ಪ ಅಂಗೀಕರಿಸಿರುವ ದಿನಾಂಕ** |
|---|---|---|---|
| 01 | ಕರ್ನಾಟಕ ಧನವಿನಿಯೋಗ (ಸಂಖ್ಯೆ–3) ವಿಧೇಯಕ, 2019 | 12.10.2019 | 12.10.2019 |
| 02 | ಕರ್ನಾಟಕ ಧನವಿನಿಯೋಗ (ಸಂಖ್ಯೆ–4) ವಿಧೇಯಕ, 2019 | 12.10.2019 | 12.10.2019 |
| 03 | ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ)ವಿಧೇಯಕ, 2019 | 12.10.2019 | 12.10.2019 |

****